ಉಳಿದ ಆ ಇಬ್ಬರನ್ನೂ ಆಹ್ವಾನಿಸುವಂತೆ ಸೂಚಿಸುತ್ತಾನೆ. ರಾಜ ಕೊಟ್ಟ ಸೂಚನೆ ಪ್ರಕಾರ ಆ ಮಂತ್ರಿ ಅರಮನೆಯಲ್ಲಿ ಎಲ್ಲ ವ್ಯವಸ್ಥೆ ಮಾಡಿ, ತನ್ನ ಸೈನಿಕರನ್ನು ಕಳುಹಿಸಿ ಅವರನ್ನು ಕರೆತರುವಂತೆ ಹೇಳುತ್ತಾನೆ. ಮರುದಿನ ಸೈನಿಕರು ರಾಜಮರ್ಯಾದೆಯಿಂದ ಆ ಇಬ್ಬರನ್ನೂ ಅರಮನೆಗೆ ಕರೆದು ತಂದಾಗ ಅವರು ತಮ್ಮ ಮಿತ್ರ ಮಂತ್ರಿ ಆಗಿರುವುದನ್ನು ಕಂಡು ತುಂಬಾ ಖುಷಿಪಡುತ್ತಾರೆ. ಅಷ್ಟರಲ್ಲಿ ರಾಜನು ಅಲ್ಲಿಗೆ ಬಂದವ ಈ ಇಬ್ಬರನ್ನು ಆತ್ಮೀಯವಾಗಿ ಸ್ವಾಗತಿಸಿ: 'ಈಗ ನೀವೇನು ಮಾಡಿಕೊಂಡಿದ್ದೀರಿ. ಸುಖವಾಗಿರಬೇಕಲ್ವಾ' ಎಂದು ತಾನು ಧನ ಸಹಾಯ ಮಾಡಿದವನಿಗೆ ಕೇಳಿದಾಗ ಆತ ಸಪ್ಪೆ ಮೋರೆ ಹಾಕಿಕೊಂಡು 'ಸ್ವಾಮಿ, ನಾನು ಅಂದು ತಮ್ಮ ಬಳಿ ಧನ ಕೇಳಿ ದೊಡ್ಡ ತಪ್ಪು ಮಾಡಿದೆ. ಅಷ್ಟೊಂದು ಹಣ ನನ್ನ ಕೈಗೆ ಬಂದ ನಂತರ ತುಂಬಾ ಸೋಮಾರಿ ಆಗಿಬಿಟ್ಟೆ ಹಣ ಇದೆ ಅಂತ ಅದನ್ನು ಬೇಕಾಬಿಟ್ಟಿ ಖರ್ಚು ಮಾಡಿ, ನನ್ನ ಆರೋಗ್ಯವನ್ನೂ ಹಾಳು ಮಾಡಿಕೊಂಡೆ. ನನ್ನ ನಿಶ್ಶಕ್ತಿ ಅರಿತ ದುರುಳರು ಎಲ್ಲ ಹಣವನ್ನೂ ಕದ್ದೊಯ್ದರು. ಈಗ ನಾನು ಮೊದಲು ಹೇಗಿದ್ದೆನೋ ಅದೇ ಸ್ಥಿತಿಗೆ ಬಂದಿದ್ದೇನೆ' ಎಂದು ವಾಸ್ತವ ವಿಷಯ ಮುಚ್ಚಿಡದೇ ಎಲ್ಲ ವಿವರಿಸುತ್ತಾನೆ. ದೊಡ್ಡಮನೆ, ಕುದುರೆ ಗಾಡಿ ಕೊಟ್ಟ ವ್ಯಕ್ತಿಗೆ 'ಈಗ ನೀನು ಆರಾಮದಿಂದ ಜೀವನ ಸಾಗಿಸುತ್ತಿದ್ದೀಯಾ ಅಲ್ವಾ?' ಎಂದು ಕೇಳಿದಾಗ ಆ ವ್ಯಕ್ತಿ 'ಏನು ಹೇಳಲಿ ಸ್ವಾಮಿ, ನಾನು ಬಯಸಿದಂತೆ ತಾವು ನದಿಯ ಬಳಿ ದೊಡ್ಡ ಮನೆ ಕೊಟ್ಟಿರಿ ಜೊತೆಗೆ ಕುದುರೆ ಗಾಡಿ ಕೂಡ. ಸುಖ ಸಿಕ್ಕ ನಂತರ ಎಲ್ಲಾ ಮೈಮರೆತು ಬಿಟ್ಟಿದ್ದೆ. ಹೀಗೇ ಒಂದು ಸಲ ಎಡೆಬಿಡದೇ ಆರು ದಿನಗಳ ಸತತ ಮಳೆ ಸುರಿದು ಪ್ರವಾಹ ಬಂದು ಎಲ್ಲವೂ ಕೊಚ್ಚಿಕೊಂಡು ಹೋಯಿತು. ಈಗ ನಾನು ಮೊದಲು ಹೇಗಿದ್ದೆನೋ ಮತ್ತೆ ಅದೇ ಸ್ಥಿತಿಗೆ ಬಂದಿದ್ದೇನೆ' ಎಂದು ಉತ್ತರಿಸುತ್ತಾನೆ. ಅವರ ಮಾತು ಆಲಿಸಿದ ರಾಜ 'ನೋಡಿ, ಒಂದು ಮಾತು ಯಾವಾಗಲೂ ನೆನಪಿಟ್ಟುಕೊಳ್ಳಿ. ಧನ–ಕನಕ, ಆಸ್ತಿ, ಅಧಿಕಾರ, ಸಂಪತ್ತು ಯಾವುದೂ ಶಾಶ್ವತವಾಗಿ ಇರಲ್ಲ. ಅದೇ ವಿದ್ಯೆ ಬುದ್ಧಿ ಇದ್ದರೆ ಅದನ್ನು ಯಾರೂ ಕದಿಯಲೂ ಆಗಲ್ಲ. ವಿದ್ಯೆಯ ಎದುರು ಎಲ್ಲವೂ ನಗಣ್ಯ. ಅಂದರೆ ವಿದ್ಯೆಗಿಂತ ಯಾವುದೂ ದೊಡ್ಡದಲ್ಲ. ಈಗ ನೀವೇ ನೋಡಿ ಅಂದು ನಿಮ್ಮ ಜೊತೆಗೆ ಇದ್ದವ ಈಗ ಮಂತ್ರಿ. ಅವತ್ತು ತನಗೆ ಧನ ಕನಕ ಏನೂ ಬೇಡ ತನಗೆ ಓದು ಬರಹ ಕಲಿಯಲು ಸಹಾಯ ಮಾಡಿ ಎಂದು ಕೇಳಿದ್ದ. ಅದರಂತೆ ನಾನು ಸಹಾಯ ಮಾಡಿದ್ದರಿಂದ ಇಂದು ಆತ ನನ್ನ ಆಸ್ಥಾನದಲ್ಲಿ ಮಂತ್ರಿ ಪದವಿ ಪಡೆದು ಕೆಲಸ ಮಾಡುತ್ತಿದ್ದಾನೆ' ಎಂದು ಹೇಳಿದಾಗ ಆ ಇಬ್ಬರೂ 'ಹೌದು ಸ್ವಾಮಿ, ತಾವು ಹೇಳುವುದು ಸತ್ಯ ಎನ್ನುತ್ತಾರೆ.



# ಪುಟ್ಟಿಯ ಮನೆ

■ ಮಹೇಶ್ವರ ಹುರುಕಡ್ಲಿ
ಕಲೆ: ಸಂತೋಷ್ ಸಸಿಹಿತ್ಲು

ಪುಟ್ಟಿಯ ಮನೆಯಲ್ಲಿ ಹಸುವೊಂದಿತ್ತು
ಅಂಬಾ ಎನ್ನುತ ಕೂಗುತಲಿತ್ತು
ಹುಲ್ಲನ್ನು ತಿಂದು ಹಾಲನು ಕೊಟ್ಟು
ಪುಟ್ಟಿಗೆ ಅಚ್ಚುಮೆಚ್ಚಾಗಿತ್ತು

ಪುಟ್ಟಿಯ ಮನೆಯಲ್ಲಿ ಬೆಕ್ಕೊಂದಿತ್ತು
ಮೆವ್ ಮೆವ್ ಎನ್ನುತಾ ಕೂಗುತಲಿತ್ತು
ಹಾಲನು ಕುಡಿದು ಇಲಿಯನು ಹಿಡಿದು
ಪುಟ್ಟಿಗೆ ಅಚ್ಚುಮೆಚ್ಚಾಗಿತ್ತು

ಪುಟ್ಟಿಯ ಮನೆಯಲ್ಲಿ ನಾಯೊಂದಿತ್ತು
ಬೌ ಬೌ ಎನ್ನುತಾ ಬೊಗಳುತಲಿತ್ತು
ರೊಟ್ಟಿಯ ತಿಂದು ಮನೆಯನು ಕಾದು
ಪುಟ್ಟಿಗೆ ಅಚ್ಚುಮೆಚ್ಚಾಗಿತ್ತು

ಪುಟ್ಟಿಯ ಮನೆಯಲ್ಲಿ ಕುರಿಯೊಂದಿತ್ತು
ಮ್ಯೇ ಮ್ಯೇ ಎಂದು ಕೂಗುತಲಿತ್ತು
ಸೊಪ್ಪನು ತಿಂದು ಉಣ್ಣೆಯ ಕೊಟ್ಟು
ಪುಟ್ಟಿಗೆ ಅಚ್ಚುಮೆಚ್ಚಾಗಿತ್ತು

ಪುಟ್ಟಿಯ ಮನೆಯಲ್ಲಿ ಕೋಳಿಯೊಂದಿತ್ತು
ಕೊಕ್ ಕೊಕ್ ಎಂದು ಕೂಗುತಲಿತ್ತು
ಕಾಳನು ತಿಂದು ಮೊಟ್ಟೆಯನಿಟ್ಟು
ಪುಟ್ಟಿಗೆ ಅಚ್ಚುಮೆಚ್ಚಾಗಿತ್ತು

ಪುಟ್ಟಿಯ ಮನೆಯದು ವಿಶಾಲವಾಗಿತ್ತು
ವಿಧ ವಿಧ ಪ್ರಾಣಿಗಳ ಮನೆಯಾಗಿತ್ತು
ದಿನವೂ ಅವುಗಳ ಲಾಲನೆ–ಪಾಲನೆ
ಪುಟ್ಟಿಗೆ ಅಚ್ಚುಮೆಚ್ಚಾಗಿತ್ತು

## ಕುಂಚ ಪ್ರಪಂಚ





**ದೀಕ್ಷಾ ಎಚ್.ಎಂ.**
9ನೇ ತರಗತಿ
ಕೇಂದ್ರೀಯ ವಿದ್ಯಾಲಯ,
ಬಳ್ಳಾರಿ